ಕರ್ನಾಟಕ ಸರ್ಕಾರ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಾರ್ಯಾಲಯ ಕೊಪ್ಪಳ ಪ್ರಾದೇಶಿಕ ವಿಭಾಗ, ಕೊಪ್ಪಳ.

ದೂರವಾಣಿ ಮತ್ತು ಫ್ಯಾಕ್ಸ್: 08539-220021 ಇ-ಮೇಲ್: kpal.dcf@gmail.com

ಸಂ:ಲ್ಯಾಂಡ್/ಎಫ್‌ಸಿ/ಫ.ಮಂ/ಸಿಆರ್-5/2021-22

ದಿ:30/12/2021 31

## ಪರಿಷ್ಕೃತ ಡಿಮ್ಯಾಂಡ್ ನೋಟ್

ಗೆ,

ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ,
ಕೊಪ್ಪಳ ವಿಭಾಗ, ಕೊಪ್ಪಳ.

ಮಾನ್ಯರೇ,

ವಿಷಯ :- ಕುಷ್ಟಗಿ ತಾಲ್ಲೂಕಿನ ಹನಮಸಾಗರ ಹೋಬಳಿಯ ಕಬ್ಬರಗಿ ಗ್ರಾಮದ ಸರ್ವೆ ನಂ: 53, 62 & 129ರ ವ್ಯಾಪ್ತಿಯಲ್ಲಿ ಬರುವ 0.96 ಹೆಕ್ಟರ್ ಅರಣ್ಯ ಪ್ರದೇಶವನ್ನು ರಸ್ತೆ ನಿರ್ಮಿಸಲು ಗುತ್ತಿಗೆ ಮೇಲೆ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ :-
1. ಈ ಕಛೇರಿ ಪತ್ರ ಸಂಖ್ಯೆ: ಲ್ಯಾಂಡ್/ಎಫ್‌ಸಿ/ಫಮಂ/ಸಿಆರ್-5/2020-21 ದಿ:04/03/2021 ಮತ್ತು ದಿ:17/06/2021
2. ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಆಫೀಸರ್ ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ :ಕೆಎಫ್‌ಡಿ/ಹೆಚ್‌ಓಎಫ್‌ಎಫ್/ಎ5-4/(ಜಿಎಫ್‌ಎಲ್)/29/2020-ಎಫ್‌ಸಿ ದಿ:28/06/2021
3. ಮಾನ್ಯ ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ ಇವರ ಆದೇಶ ಸಂಖ್ಯೆ: ಕಕಪ್ರಮಂ/ಯೋಶಾ/ಕ್ರಿಯಾ/ಕೊಪ್ಪಳ/ಮೈಕ್ರೋ/04/2021/22/4976 ದಿ:30/10/2021

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿಯ ಈ ಕಛೇರಿಯ ಪತ್ರದ ಮೂಲಕ ಸರಕಾರವು ನಿಮಗೆ ಕುಷ್ಟಗಿ ತಾಲ್ಲೂಕಿನ ಹನಮಸಾಗರ ಹೋಬಳಿಯ ಕಬ್ಬರಗಿ ಗ್ರಾಮದ ಸರ್ವೆ ನಂ: 53, 62 & 129ರ ಅರಣ್ಯ ಪ್ರದೇಶದಲ್ಲಿ ರಸ್ತೆ ನಿರ್ಮಿಸಲು ಸರಕಾರವು ಕೆಲವೊಂದು ಷರತ್ತುಗಳೊಂದಿಗೆ ತಾತ್ವಿಕ ಅನುಮೋದನೆ ನೀಡಿರುವುದರಿಂದ ಸರಕಾರದ ಪತ್ರದಲ್ಲಿ ತಿಳಿಸಿರುವಂತೆ ಉಪಯೋಗಿ ಸಂಸ್ಥೆಯಾದ ನಿಮ್ಮಿಂದ ಸದರಿ ಷರತ್ತುಗಳಿಗೆ ಅನುಪಾಲನಾ ವರದಿ ಹಾಗೂ ಸರಕಾರಕ್ಕೆ ಬರಬೇಕಾದ ಎನ್.ಪಿ.ವಿ. ಮೊತ್ತವನ್ನು ಪಾವತಿಸುವಂತೆ ತಿಳಿಸಿ ಪರಿಷ್ಕೃತ ಡಿಮ್ಯಾಂಡ್ ನೋಟ್ ಕಳುಹಿಸಲಾಗಿತ್ತು. ಆದರೆ ಉಲ್ಲೇಖ(2)ರಲ್ಲಿಯ ಪತ್ರದಲ್ಲಿ ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಬೆಂಗಳೂರು ರವರು ಕೆಲವೊಂದು ಮಾರ್ಪಾಡುಗಳನ್ನು ಮಾಡಿ ಆದೇಶಿಸಿರುವ ಪ್ರಯುಕ್ತ ಸದರಿ ಡಿಮ್ಯಾಂಡ್ ನೋಟನ್ನು ಪರಿಷ್ಕರಿಸಿ ಕೆಳಗಿನ ಬಾಬತ್ತುಗಳ ಮೊತ್ತವನ್ನು ಪಾವತಿಸಲು ತಿಳಿಸಿರುತ್ತಾರೆ.

ಮುಂದುವರೆದು ಉಲ್ಲೇಖ(3)ರಲ್ಲಿ ಮಾನ್ಯ ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ ರವರು ಕುಷ್ಟಗಿ ತಾಲ್ಲೂಕಿನ ಕಬ್ಬರಗಿ ಯಿಂದ ಕಪೀಲ ತೀರ್ಥ ರಸ್ತೆಯ ಎರಡೂ ಬದಿಗಳಲ್ಲಿ ಸಸಿ ನೆಡುವ ಕಾಮಗಾರಿಗೆ ರೂ, 23.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಿರುತ್ತಾರೆ. ಆದುದರಿಂದ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ನಿಗದಿಪಡಿಸಿದ ಅನುದಾನದಲ್ಲಿ ಈ ಕೆಳಕಂಡ ಮೊತ್ತವನ್ನು ನೀವು ಪಾವತಿಸಿದ ನಂತರ ನಿಮ್ಮ ಪ್ರಸ್ತಾವನೆಯನ್ನು ಸ್ಟೇಜ್-2ಗೆ ಅನುಮೋದಿಸಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದು.

**ಪಾವತಿಸಬೇಕಾದ ಮೊತ್ತ ಈ ಕೆಳಕಂಡಂತಿರುತ್ತದೆ.**

| | | |
|---|---|---|
| 1 | ಎನ್.ಪಿ.ವಿ.ಮೊತ್ತ 0.96 ಹೆಕ್ಟರ್‌ಗೆ ರೂ.4,38,000/- ಪ್ರತಿ ಹೆಕ್ಟರ್‌ಗೆ (As per Handbook of Forest Conservation Act 1980 and Forest Conservation Rules 2003 edition 2019) | ರೂ, 4,20,480 |
| 2 | ಗುತ್ತಿಗೆ ನೀಡಿರುವ ಪ್ರದೇಶದಲ್ಲಿ ರಸ್ತೆ ನಿರ್ಮಿಸುವ ಎರಡು ಬದಿಗಳಲ್ಲಿ ಸ್ಟ್ರಿಪ್ ಪ್ಲಾಂಟೇಷನ್ ನಿರ್ಮಿಸುವ ಬಾಬ್ತು 2021-22ನೇ ಸಾಲಿನ ಡಾಟಾ ಶೀಟ್ ಪ್ರಕಾರ ರಸ್ತೆ ಬದಿ ನೆಡುತೋಪು ಯೋಜನೆಯಡಿ 1 ಕಿಲೋ ಮೀಟರ್‌ಗೆ ಒಂದು ಬದಿಯಲ್ಲಿ 150 ಗಿಡಗಳಂತೆ ಎರಡೂ ಬದಿಗಳಿಗೆ ಒಳಗೊಂಡಂತೆ 300 ಗಿಡಗಳಿಗೆ ರೂ, 7,00,320/-ರಂತೆ ಒಟ್ಟು 1.603 ಕಿಲೋ ಮೀಟರ್‌ಗೆ ಆಗುವ ಬಾಬ್ತು (1.6 X 7,00,320/-) | ರೂ, 11,22,613 |
| | ಒಟ್ಟು | **ರೂ, 15,43,093** |

338 LAND LTR 21-22

ಮುಂದುವರೆದು ಉಳಿದ ಎಲ್ಲಾ ಷರತ್ತುಗಳಿಗೆ ಅನುಪಾಲನಾ ವರದಿಯನ್ನು ನೇರವಾಗಿ ಮಾನ್ಯ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಬೆಂಗಳೂರು ಹಾಗೂ ನೋಡಲ್ ಆಫೀಸರ್ ಬೆಂಗಳೂರು ರವರಿಗೆ ಅಪ್‌ಲೋಡ್ ಮಾಡಿ ಅದರ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಲು ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ತಿಳಿಸಿದೆ.

**ಲಗತ್ತು:**ಪರಿಷ್ಕರಿಸಿದ ಅಧಿಕೃತ ಜ್ಞಾಪನಾ ಪತ್ರದ ಪ್ರತಿ.

ತಮ್ಮ ವಿಶ್ವಾಸಿ
**ಸಹಿ/-**
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕೊಪ್ಪಳ ವಿಭಾಗ, ಕೊಪ್ಪಳ

1. ಪ್ರತಿಯನ್ನು ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿಗಳು (ಎಫ್‌ಸಿಎ) ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಲಾಗಿದೆ.
2. ಪ್ರತಿಯನ್ನು ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಬಳ್ಳಾರಿ ವೃತ್ತ ಬಳ್ಳಾರಿ ಇವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಲಾಗಿದೆ.
3. ಪ್ರತಿಯನ್ನು ಮಾನ್ಯ ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ ಇವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಲಾಗಿದೆ.

31.12.21
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕೊಪ್ಪಳ ವಿಭಾಗ, ಕೊಪ್ಪಳ

ಕರ್ನಾಟಕ ಸರ್ಕಾರ

## ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಾರ್ಯಾಲಯ ಕೊಪ್ಪಳ ಪ್ರಾದೇಶಿಕ ವಿಭಾಗ, ಕೊಪ್ಪಳ.

**ದೂರವಾಣಿ ಮತ್ತು ಪ್ಯಾಕ್ಸ್: 08539-220021 ಇ-ಮೇಲ್: kpal.dcf@gmail.com**

ಸಂ:ಲ್ಯಾಂಡ್/ಎಫ್‌ಸಿ/ಫ.ಮಂ/ಸಿಆರ್-5/2021-22 /1265 ದಿ:31/12/2021

ಗೆ,

ಮಾನ್ಯ ಜಿಲ್ಲಾಧಿಕಾರಿಗಳು,
ಕೊಪ್ಪಳ ಜಿಲ್ಲೆ, ಕೊಪ್ಪಳ.

HKRDB

ಮಾನ್ಯರೇ,

ವಿಷಯ :- ಕುಷ್ಟಗಿ ತಾಲ್ಲೂಕಿನ ಹನಮಸಾಗರ ಹೋಬಳಿಯ ಕಬ್ಬರಗಿ ಗ್ರಾಮದ ಸರ್ವೆ ನಂ: 53, 62 & 129ರ ವ್ಯಾಪ್ತಿಯಲ್ಲಿ ಬರುವ 0.96 ಹೆಕ್ಟರ್ ಅರಣ್ಯ ಪ್ರದೇಶವನ್ನು ರಸ್ತೆ ನಿರ್ಮಿಸಲು ಗುತ್ತಿಗೆ ಮೇಲೆ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ :-
1. ಈ ಕಛೇರಿ ಪತ್ರ ಸಂ:ಲ್ಯಾಂಡ್/ಎಫ್‌ಸಿ/ಫಮಂ/ಸಿಆರ್-5/2020-21 ದಿ:04/03/2021 ಮತ್ತು ದಿ:17/06/2021
2. ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಆಫೀಸರ್ ಬೆಂಗಳೂರು ರವರ ಕಛೇರಿ ಪತ್ರ ಸಂ:ಕೆಎಫ್‌ಡಿ/ ಹೆಚ್‌ಓಎಫ್ ಎಫ್/ಎ5-4/(ಜಿಎಫ್ಎಲ್)/29/2020-ಎಫ್‌ಸಿ ದಿ:28/06/2021
3. ಮಾನ್ಯ ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ ಇವರ ಆದೇಶ ಸಂ:ಕಕಪ್ರಮಂ/ಯೋಶಾ/ಕ್ರಿಯಾ/ಕೊಪ್ಪಳ/ ಮೈಕ್ರೋ/04/2021/22/4976 ದಿ:30/10/2021
4. ಈ ಕಛೇರಿ ಪರಿಷ್ಕೃತ ಡಿಮ್ಯಾಂಡ್ ನೋಟ್ ಪತ್ರ ಸಂಖ್ಯೆ: ಲ್ಯಾಂಡ್/ಎಫ್‌ಸಿ/ಫ.ಮಂ/ ಸಿಆರ್-5/2021-22 ದಿ:30/12/2021

ಜಿಲ್ಲಾಧಿಕಾರಿಗಳ ಕಾರ್ಯಾಲಯ ಕೊಪ್ಪಳ
ಸಂಕಲನ:
0 3 JAN 2022
ಅ.ಜಿ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿಯ ಈ ಕಛೇರಿಯ ಪತ್ರದ ಮೂಲಕ ಸರಕಾರವು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕೊಪ್ಪಳ ಇವರಿಗೆ ಕುಷ್ಟಗಿ ತಾಲ್ಲೂಕಿನ ಹನಮಸಾಗರ ಹೋಬಳಿಯ ಕಬ್ಬರಗಿ ಗ್ರಾಮದ ಸರ್ವೆ ನಂ: 53, 62 & 129ರ ಅರಣ್ಯ ಪ್ರದೇಶದಲ್ಲಿ ರಸ್ತೆ ನಿರ್ಮಿಸಲು ಕೆಲವೊಂದು ಷರತ್ತುಗಳೊಂದಿಗೆ ತಾತ್ವಿಕ ಅನುಮೋದನೆ ನೀಡಿರುವುದರಿಂದ ಸರಕಾರದ ಪತ್ರದಲ್ಲಿ ತಿಳಿಸಿರುವಂತೆ ಉಪಯೋಗಿ ಸಂಸ್ಥೆಯವರು ಸದರಿ ಷರತ್ತುಗಳಿಗೆ ಅನುಪಾಲನಾ ವರದಿ ಹಾಗೂ ಸರಕಾರಕ್ಕೆ ಬರಬೇಕಾದ ಮೊತ್ತವನ್ನು ಪಾವತಿಸಬೇಕಾಗಿರುತ್ತದೆ. ಉಲ್ಲೇಖ(2)ರಲ್ಲಿಯ ಪತ್ರದಲ್ಲಿ ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಬೆಂಗಳೂರು ರವರು ಕೆಲವೊಂದು ಮಾರ್ಪಾಡುಗಳನ್ನು ಮಾಡಿ ಆದೇಶಿಸಿರುವ ಪ್ರಯುಕ್ತ ಸದರಿ ಡಿಮ್ಯಾಂಡ್ ನೋಟನ್ನು ಪರಿಷ್ಕರಿಸಿ ಕೆಳಗಿನ ಬಾಬತ್ತುಗಳ ಮೊತ್ತವನ್ನು ಪಾವತಿಸಲು ಉಲ್ಲೇಖ(4)ರ ಈ ಕಛೇರಿ ಪತ್ರದ ಪ್ರಕಾರ ಉಪಯೋಗಿ ಸಂಸ್ಥೆಯವರಿಗೆ ಡಿಮ್ಯಾಂಡ್ ನೋಟ್‌ನ್ನು ನೀಡಲಾಗಿದೆ. (ಪ್ರತಿ ಲಗತ್ತಿಸಿದೆ)

ಮುಂದುವರೆದು ಉಲ್ಲೇಖ(3)ರಲ್ಲಿ ಮಾನ್ಯ ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ ರವರು ಕುಷ್ಟಗಿ ತಾಲ್ಲೂಕಿನ ಕಬ್ಬರಗಿ ಯಿಂದ ಕಪಿಲ ತೀರ್ಥ ರಸ್ತೆಯ ಎರಡೂ ಬದಿಗಳಲ್ಲಿ ಸಸಿ ನೆಡುವ ಕಾಮಗಾರಿಗೆ ರೂ. 23.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಿರುತ್ತಾರೆ. ಆದುದರಿಂದ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ನಿಗದಿಪಡಿಸಿದ ಅನುದಾನದಲ್ಲಿ ಈ ಕೆಳಕಂಡ ಮೊತ್ತವನ್ನು ಉಪಯೋಗಿ ಸಂಸ್ಥೆಯವರು ಪಾವತಿಸಿದ ನಂತರ ಪ್ರಸ್ತಾವನೆಯನ್ನು ಸ್ಟೇಜ್-2ಗೆ ಅನುಮೋದಿಸಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಬೇಕಾಗಿರುವುದರಿಂದ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ನಿಗದಿಪಡಿಸಿರುವ ಮೊತ್ತ ರೂ. 23.00 ಲಕ್ಷಗಳನ್ನು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕೊಪ್ಪಳ ಇವರಿಗೆ ಬಿಡುಗಡೆಗೊಳಿಸಲು ಈ ಮೂಲಕ ತಮ್ಮಲ್ಲಿ ಗೌರವಗಳೊಂದಿಗೆ ಕೋರಲಾಗಿದೆ.

**ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕೊಪ್ಪಳ ಇವರು ಪಾವತಿಸಬೇಕಾದ ಮೊತ್ತ ವಿವರ ಈ ಕೆಳಕಂಡಂತಿರುತ್ತದೆ.**

| | | |
|---|---|---|
| 1 | ಎನ್.ಪಿ.ವಿ.ಮೊತ್ತ 0.96 ಹೆಕ್ಟರ್‌ಗೆ ರೂ.4,38,000/- ಪ್ರತಿ ಹೆಕ್ಟರ್‌ಗೆ (As per Handbook of Forest Conservation Act 1980 and Forest Conservation Rules 2003 edition 2019) | ರೂ. 4,20,480 |
| 2 | ಗುತ್ತಿಗೆ ನೀಡಿರುವ ಪ್ರದೇಶದಲ್ಲಿ ರಸ್ತೆ ನಿರ್ಮಿಸುವ ಎರಡು ಬದಿಗಳಲ್ಲಿ ಸ್ಟ್ರಿಪ್ ಪ್ಲಾಂಟೇಷನ್ ನಿರ್ಮಿಸುವ ಬಾಬ್ತು 2021-22ನೇ ಸಾಲಿನ ಡಾಟಾ ಶೀಟ್ ಪ್ರಕಾರ ರಸ್ತೆ ಬದಿ ನೆಡುತೋಪು ಯೋಜನೆಯಡಿ 1 ಕಿಲೋ ಮೀಟರ್‌ಗೆ ಒಂದು ಬದಿಯಲ್ಲಿ 150 ಗಿಡಗಳಂತೆ ಎರಡೂ ಬದಿಗಳಿಗೆ ಒಳಗೊಂಡಂತೆ 300 ಗಿಡಗಳಿಗೆ ರೂ. 7,00,320/-ರಂತೆ ಒಟ್ಟು 1.603 ಕಿಲೋ ಮೀಟರ್‌ಗೆ ಆಗುವ ಬಾಬ್ತು (1.6 X 7,00,320/-) | ರೂ. 11,22,613 |
| | ಒಟ್ಟು | **ರೂ. 15,43,093** |

ತಮ್ಮ ವಿಶ್ವಾಸಿ

01/01/22

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕೊಪ್ಪಳ ವಿಭಾಗ, ಕೊಪ್ಪಳ

10925

14/1/22 11.55 AM

342 LAND LTR 21-22

ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳು ಕೊಪ್ಪಳ ಇವರ ನಡವಳಿಗಳು

ವಿಷಯ: ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಕಲಬುರಗಿಯ 2020-21ನೇ ಸಾಲಿನ ಮೈಕ್ರೋ ಮತ್ತು ಮ್ಯಾಕ್ರೋ ಯೋಜನೆಯ ಅಡಿಯಲ್ಲಿ ಮಂಜೂರಿ ನೀಡಿದ ಕಾಮಗಾರಿಗಳ ಅನುಷ್ಠಾನ ಇಲಾಖೆ ಬದಲಾವಣೆ ಮಾಡಿ ಅನುಮೋದನೆ ನೀಡುವ ಕುರಿತು.

ಉಲ್ಲೇಖ: 1) ಮಾನ್ಯ ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ ಇವರ ಆದೇಶ ಸಂ:ಕ.ಕ.ಪ್ರ.ಮಂ/ ಯೋಶಾ/ಕ್ರಿಯಾ/ ಕೊಪ್ಪಳ/ ಮೈಕ್ರೋ/ 04/ 2021-22/4976 ದಿನಾಂಕ:30.10.2021

2) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೊಪ್ಪಳ ರವರ ಪತ್ರ ಸಂ: ಲ್ಯಾಂಡ್ / ಎಫ್.ಸಿ/ ಫ.ಮಂ/ ಸಿಆರ್-5/ 2021-22 / 1265 ದಿನಾಂಕ:31.12.2021

**ಪ್ರಸ್ತಾವನೆ :-**

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1) ರ ಆದೇಶದ ಮೂಲಕ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಕಲಬುರಗಿಯ 2021-22ನೇ ಸಾಲಿನ ಕೊಪ್ಪಳ ಜಿಲ್ಲೆಗೆ ನಿಗದಿಪಡಿಸಿದ ಮೈಕ್ರೋ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ, ಅನುಷ್ಠಾನ ಇಲಾಖೆ ನೇಮಿಸಿ ಆದೇಶಿಸಿರುತ್ತದೆ. ಉಲ್ಲೇಖಿತ(2)ರ ಪತ್ರದ ಮೂಲಕ ಡಿಮ್ಯಾಂಡ್ ನೋಟನ್ನು ಪರಿಕ್ಷರಿಸಿ ಉಪಯೋಗಿ ಸಂಸ್ಥೆಯವರು ರೂ.15,43,093/-ಗಳನ್ನು ಪಾವತಿಸಿದ ನಂತರ ಪ್ರಸ್ತಾವನೆಯನ್ನು ಸ್ಟೇಜ್-2ಗೆ ಅನುಮೋದಿಸಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಬೇಕಾಗಿರುವುದರಿಂದ ಲೋಕೋಪಯೋಗಿ ಇಲಾಖೆಗೆ ರೂ.23.00ಲಕ್ಷಗಳನ್ನು ಬಿಡುಗಡೆಗೊಳಿಸಲು ಕೋರಿರುತ್ತಾರೆ.

| ಕ್ರ ಸಂ. | **workcode** | ಕಾಮಗಾರಿ ವಿವರ | ಅಂದಾಜು ಮೊತ್ತ | ಈಗಾಗಲೇ ನೇಮಿಸಿದ ಅನುಷ್ಠಾನ ಇಲಾಖೆ | ಈಗ ಬದಲಾವಣೆ ಮಾಡಿ ನೇಮಿಸಬೇಕಾದ ಅನುಷ್ಠಾನ ಇಲಾಖೆ |
|---|---|---|---|---|---|
| 1 | KPL2121243368 MICRO-General - Non Social | ಕುಷ್ಟಗಿ ತಾಲೂಕಿನ ಕಬ್ಬರಗಿಯಿಂದ ಕಪೀಲತೀರ್ಥ ರಸ್ತೆ ಎರಡು ಬದಿ ಸಸಿ ನೆಡೆಸುವ ಕಾಮಗಾರಿ (ಅರಣ್ಯ ಇಲಾಖೆಯಲ್ಲಿ) | 23.00 | DFO Koppal | EE PWD Koppal |
| | | **ಒಟ್ಟು** | **23.00** | | |

ಮೇಲ್ಕಾಣಿಸಿದ ಕಾಮಗಾರಿಗೆ ಡಿಮ್ಯಾಂಡ್ ನೋಟನ್ನು ಪರಿಕ್ಷರಿಸಿದ ಬಾಬತ್ತುಗಳ ಮೊತ್ತ ರೂ.15,43,093/-ಗಳನ್ನು ಲೋಕೋಪಯೋಗಿ ಇಲಾಖೆಯ ಮುಖಾಂತರ ಪಾವತಿಸಬೇಕಾಗಿರುವುದರಿಂದ ಸದರಿ ಕಾಮಗಾರಿಯ ಅನುಷ್ಠಾನ ಇಲಾಖೆಯನ್ನು ಬದಲಾವಣೆ ಮಾಡಬೇಕಾಗಿರುತ್ತದೆ. ಮಂಡಳಿಯ ಪ್ರಗತಿ ಪರಿಶೀಲನೆ ಸಭೆಯಲ್ಲಿ ಕಾಮಗಾರಿಗಳ ಅನುಷ್ಠಾನಾಧಿಕಾರಿಗಳನ್ನು ಜಿಲ್ಲಾಧಿಕಾರಿಗಳ ಹಂತದಲ್ಲಿಯೇ ಬದಲಾವಣೆ ಮಾಡಿ ಆದೇಶ ಹೊರಡಿಸಿ, ಘಟನೋತ್ತರ ಮಂಜೂರಾತಿಗಾಗಿ ಸಲ್ಲಿಸಲು ಸೂಚಿಸಿರುತ್ತಾರೆ.

ಪ್ರಯುಕ್ತ ಸದರಿ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಅನುಷ್ಠಾನಗೊಳಿಸುವ ಆಡಳಿತ ಹಿತ ದೃಷ್ಟಿಯಿಂದ ಕಾಮಗಾರಿಯ ಅನುಷ್ಠಾನಾಧಿಕಾರಿಗಳನ್ನು ಬದಲಾವಣೆ ಮಾಡುವುದು ಸೂಕ್ತವೆಂದು ಕಂಡುಬಂದ ಪ್ರಯುಕ್ತ ಈ ಕೆಳಗಿನಂತೆ ಆದೇಶಿಸಲಾಗಿದೆ.

: : ಆ ದೇ ಶ: :

ಸಂ. ಕಂದಾಯ/KKRDB/ Micro/ 2021-22 ದಿನಾಂಕ:28.01.2022

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಮೇರೆಗೆ, 2021-22ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಯೋಜನೆಯ ಮೈಕ್ರೋ ಅನುದಾನದಲ್ಲಿ ಮಂಜೂರಿ ನೀಡಿದ ಈ ಕೆಳಕಾಣಿಸಿದ ಕಾಮಗಾರಿಗಳ ಅನುಷ್ಠಾನಾಧಿಕಾರಿಯನ್ನು ಬದಲಾವಣೆ ಮಾಡಿ ಆದೇಶಿಸಲಾಗಿದೆ. ಸದರಿ ಕಾಮಗಾರಿಗಳನ್ನು ಈಗಾಗಲೇ ಮಂಜೂರಿ ನೀಡಿದ ಆದೇಶದಲ್ಲಿ ವಿಧಿಸಿದ ಷರತ್ತುಗಳನ್ವಯ ಅನುಷ್ಠಾನಗೊಳಿಸಲು ಹಾಗೂ ಅರಣ್ಯ ಇಲಾಖೆಗೆ ಡಿಮ್ಯಾಂಡ್ ನೋಟನ್ನು ಪರಿಶ್ಕರಿಸಿದ ಬಾಬತ್ತುಗಳ ಮೊತ್ತ ರೂ.15,43,093/-ಗಳನ್ನು ಪಾವತಿಸಲು ಸೂಚಿಸಿದೆ.

| ಕ್ರ ಸಂ. | workcode | ಕಾಮಗಾರಿ ವಿವರ | ಅಂದಾಜು ಮೊತ್ತ | ಈಗಾಗಲೇ ನೇಮಿಸಿದ ಅನುಷ್ಠಾನ ಇಲಾಖೆ | ಈಗ ಬದಲಾವಣೆ ಮಾಡಿ ನೇಮಿಸಿದ ಅನುಷ್ಠಾನ ಇಲಾಖೆ |
|---|---|---|---|---|---|
| 1 | KPL2121243368 MICRO-General - Non Social | ಕುಷ್ಟಗಿ ತಾಲೂಕಿನ ಕಬ್ಬರಗಿಯಿಂದ ಕಪೀಲತೀರ್ಥ ರಸ್ತೆ ಎರಡು ಬದಿ ಸಸಿ ನೆಡೆಸುವ ಕಾಮಗಾರಿ (ಅರಣ್ಯ ಇಲಾಖೆಯಲ್ಲಿ) | 23.00 | DFO Koppal | EE PWD Koppal |
| | | ಒಟ್ಟು | 23.00 | | |

ಜಿಲ್ಲಾಧಿಕಾರಿಗಳು,
ಕೊಪ್ಪಳ

ಗೆ,

ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ಕೊಪ್ಪಳ

ಪ್ರತಿಯನ್ನು;

1) ಮಾನ್ಯ ಶಾಸಕರು, ಕುಷ್ಟಗಿ ವಿಧಾನಸಭಾ ಕ್ಷೇತ್ರ, ಕುಷ್ಟಗಿ ರವರಿಗೆ ಮಾಹಿತಿಗಾಗಿ
2) ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃಧಿ ಮಂಡಳಿ ಕಲಬುರಗಿ ರವರಿಗೆ ಮಾಹಿತಿಗಾಗಿ ಹಾಗೂ ಘಟನೋತ್ತರ ಮಂಜೂರಾತಿಗಾಗಿ ಸಲ್ಲಿಸಲಾಗಿದೆ.
3) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ಅರಣ್ಯ ವಿಭಾಗ, ಕೊಪ್ಪಳ ರವರಿಗೆ ಮಾಹಿತಿಗಾಗಿ
4) ಹೆಚ್ಚಿನ ಪ್ರತಿ ಕಡತಕ್ಕೆ.